**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 230/2017 ಸಿ.ಡಬ್ಲ್ಯೂ –08 ಪಿ.ಡಬ್ಲ್ಯೂ -08

| | | |
|---|---|---|
| ಹೆಸರು | ಃ | ಧರ್ಮರಾಜ |
| ತಾಯಿ | ಃ | ಗುಂಡಪ್ಪ |
| ವಯಸ್ಸು | ಃ | ೩೭ ವರ್ಷ |
| ಉದ್ಯೋಗ | : | ಗುತ್ತಿಗೆದಾರ |
| ವಾಸಸ್ಥಳ | ಃ | ಬಂಗರಗಾ |

ದಿನಾಂಕಃ ೦೫.೦೮.೨೦೨೪

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ಆರೋಪಿ ನಂ.೧ ನಮ್ಮ ಊರಿನ ಅಳಿಯ, ಆರೋಪಿ ನಂ.೨ ಮತ್ತು ೩ ಚಾಸಾ-೧ ರವರ ಅತ್ತೆ, ಮಾವ. ಚಾಸಾ-1 ರಿಂದ 7, 9 ರಿಂದ 12 ರವರ ಪರಿಚಯ ಇರುತ್ತದೆ.

ದಿ.09.09.2016 ರಂದು ಸದರಿ ಘಟನೆ ನಡೆದಿದೆ. ಚಾಸಾ-೧ ರವರನ್ನು ಆರೋಪಿ ನಂ.೧ ರವರ ಜೊತೆ ಮದುವೆ ಮಾಡಿ ಕೊಟ್ಟಿರುತ್ತದೆ. ಮದುವೆ ಆದ ನಂತರ ಎರಡು ವರ್ಷ ಚಾಸಾ-೧ ರವರನ್ನು ಚೆನ್ನಾಗಿ ನಡೆಸಿಕೊಂಡಿರುತ್ತಾರೆ. ನಂತರ ಕಿರುಕುಳ ಕೊಡುವುದು, ವರದಕ್ಷಿಣೆ ತೆಗೆದುಕೊಂಡು ಬಾ ಎಂದು ಕಿರುಕುಳ ಕೊಡುವುದು, ಹೊಡೆ ಬಡೆ ಮಾಡುವುದು ಮಾಡುತ್ತಿದ್ದಾರೆ ಎಂದು ಚಾಸಾ-೧ ರವರು ಹೇಳಿರುತ್ತಾರೆ. ನಂತರ ಒಂದು ದಿನ ಆರೋಪಿತರ ಮನೆಗೆ ಹೋಗಿ ಕಿರುಕುಳ ಕೊಡಬೇಡಿ ಚೆನ್ನಾಗಿ ಇಟ್ಟುಕೊಳ್ಳಿ ಎಂದು ಹೇಳಿ ಬಂದಿರುತ್ತೇವೆ. ನಂತರ ಚಾಸಾ-೧ ರವರು ಗರ್ಭವತಿ ಆದ ಕಾರಣ ಹೆರಿಗೆಗೆಂದು ತವರು ಮನೆಗೆ ಬಂದಿದ್ದಳು, ಅಲ್ಲಿಗೆ ಆರೋಪಿ ನಂ.೧ ದಿ. 09.09.2016 ರಂದು ಸಂಜೆ 5.00 ಗಂಟೆ ಸುಮಾರಿಗೆ ಚಾಸಾ-೧ ರವರ ತಾಯಿಯ ಮನೆಗೆ ಬಂದು ಏ ರಂಡಿ, ಬೋಸಡಿ, ಎಂದು ಅವಾಚ್ಯ ಶಬ್ದಗಳಿಂದ ಬೈದು ಒಂದು ರಾಡಿನಿಂದ ತಲೆಗೆ ಕೈಗೆ ಮತ್ತು ಮೊಳಕಾಲಿಗೆ ಹೊಡೆ ಬಡೆ ಮಾಡಿರುತ್ತಾನೆ. ಚಾಸಾ-೧ ರವರ ಚಿಕ್ಕಮ್ಮಳಾದ ಚಾಸಾ-೬ ರವರು ಬಿಡಿಸಲು ಬಂದಿದ್ದರು, ಅವರಿಗೂ ಸಹ ಕೂಡ ಆರೋಪಿ ನಂ.೧ ಹೊಡೆದಿರುತ್ತಾನೆ. ಚಾಸಾ-೧ ರವರು ನೆಲಕ್ಕೆ ಬಿದ್ದು ಹೊರಳಾಡುತ್ತಿದ್ದರು, ಆ ಸಮಯದಲ್ಲಿ ಚಾಸಾ-೪ ಚಾಸಾ-೯ ರಿಂದ ೧೨ ರವರು ಜಗಳ ಬಿಡಿಸಿರುತ್ತಾರೆ. ನಂತರ ಚಾಸಾ-೧ ರವರನ್ನು ಆಳಂದ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ, ಅಲ್ಲಿ ವೈದ್ಯರು ಗಾಯಗಳು ತೀವ್ರ ಸ್ವರೂಪದ್ದು ಆಗಿರುತ್ತವೆ, ಅಲ್ಲಿನ ವೈದ್ಯರು ಚೊಲೊ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ಸಲಹೆ ನೀಡಿದರು. ಆಗ ನಾವು ಕಲಬುರಗಿಯ ಪಿ.ಜಿ.ಶಹಾ ಆಸ್ಪತ್ರೆಗೆ ಹೋಗಿ ದಾಖಲು ಮಾಡಿರುತ್ತೇವೆ. ಮು.ಮಾ-೧ನ್ನು ನೋಡಿದರೆ ಗುರುತಿಸುತ್ತೇನೆ.

**(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)**

**<u>ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.</u>**

ಚಾಸಾ-೬ ರವರಿಗೆ ಆರೋಪಿ ನಂ.೧ ಬೆನ್ನಿನ ಮೇಲೆ ಹೊಡೆದಿರುತ್ತಾನೆ ಎಂದರೆ ಸರಿ. ಚಾಸಾ-೧ ರವರಿಗೆ ಆರೋಪಿ ನಂ.೧ ಮನೆಗೆ ಬಂದರೆ ನಿನ್ನನ್ನು ಸುಮ್ಮನೆ ಬಿಡುವುದಿಲ್ಲ ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಹುಂಡಾ ಬಂಗಾರ ತರದೇ ಇದ್ದರೆ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾನೆ ಎಂದು ನುಡಿಯುತ್ತಾರೆ. ಪಂಚಾಯತಿ ಮಾಡಲು ಹೋದಾಗ ನನ್ನ ಜೊತೆ, ಚಾಸಾ-೪, ೫ ಮತ್ತು ೭ ರವರು ಬಂದಿರುತ್ತಾರೆ ಎಂದರೆ ಸರಿ. ಈ ರೀತಿಯಾಗಿ ಪೋಲಿಸರಿಗೆ ನಾನು ಹೇಳಿಕೆ ನೀಡಿರುತ್ತೇನೆ ಎಂಧರೆ ಸರಿ.

**<u>ಪಾಟೀ ಸವಾಲು ಆರೋಪಿತರ ಪರ ಶ್ರೀ ಬಿ.ಎ.ಡಿ.ವಕೀಲರಿಂದ</u>**

ನಾನು ನನ್ನ ಹೇಳಿಕೆಯಲ್ಲಿ ದಿ.**೦೯.೦೯.೨೦೧೬** ರಂದು ನಾನು ಮನೆಯಲ್ಲಿದ್ದಾಗ ವಿಷಯ ಗೊತ್ತಾಗಿದ್ದೇನೆಂದರೆ ಎಂದು ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ. ನಾನು ಘಟನೆಯನ್ನು ಕಣ್ಣಾರೆ ನೋಡಿರುವುದಿಲ್ಲ ಎಂದರೆ ಸರಿ ಅಲ್ಲ. ನಾನು ನನ್ನ ಹೇಳಿಕೆಯಲ್ಲಿ ನಾವು ನಿರ್ದಿಷ್ಟವಾಗಿ ಯಾವ ದಿನಾಂಕದಂದು ಪಂಚಾಯತಿಗೆ ಹೋಗಿದ್ದೆವು ಎಂದು ಪೋಲಿಸರಿಗೆ ಹೇಳಿರುವುದಿಲ್ಲ ಎಂದರೆ ಸರಿ ಅಲ್ಲ. ನಾನು ನನ್ನ ಹೇಳಿಕೆಯನ್ನು ಪೋಲಿಸರಿಗೆ ಘಟನೆ ಸ್ಥಳದಲ್ಲಿ ಹೇಳಿರುತ್ತೇನೆ. ಸದರಿ ದಿನದಂದು ನನ್ನನ್ನು ಹೊರತುಪಡಿಸಿ ಚಾಸಾ-**೯** ಮತ್ತು **೧೨** ರವರು ಹೇಳಿಕೆಯನ್ನು ಕೊಟ್ಟಿರುತ್ತಾರೆ, ಮತ್ತೆ ಯಾರು ಹೇಳಿಕೆ ಕೊಟ್ಟರು ಎಂದು ನನಗೆ ನೆನಪಿಲ್ಲ.

ನಾನು ಘಟನೆ ನಡೆದ **೩-೪** ದಿನದ ಒಳಗಾಗಿ ಹೇಳಿಕೆಯನ್ನು ನೀಡಿರಬಹುದು. ಆರೋಪಿ ನಂ.೧ ಚಾಸಾ-೧ ರವರಿಗೆ ವರದಕ್ಷಿಣೆ ಕಿರುಕುಳ ಕೊಡುತ್ತಿದ್ದನು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ನಾನು ಘಟನೆಯನ್ನು ಕಣ್ಣಾರೆ ನೋಡಿರುವುದಿಲ್ಲ ಎಂಧರೆ ಸರಿ ಅಲ್ಲ. ಚಾಸಾ-೧ ರವರ ಮೇಲಿರುವ ಅನುಕಂಪದ ಮೇಲೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ